## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ

**ಉಪಸ್ಥಿತರುಃ ಶ್ರೀ ಪ್ರಕಾಶ್ ವಿ.,** ಬಿ.ಎ.ಎಲ್., ಎಲ್.ಎಲ್.ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಹಾವೇರಿ

**ದಿನಾಂಕಃ 03 ನೇ ಅಕ್ಟೋಬರ್ 2024**

**ಎಮ್.ವಿ.ಸಿ. ನಂ.325/2023**

**ಅರ್ಜಿದಾರರುಃ**

1. ಸುನಂದ ಕೋಂ ಭೀಮರೆಡ್ಡಿ ರಿತ್ತಿ ,
ವಯಸ್ಸುಃ 55 ವರ್ಷ,
ಉದ್ಯೋಗಃ ಮನೆಗೆಲಸ,
ಸಾಃ ಆಡೂರು, ತಾಃ ಹಾನಗಲ್,
ಜಿಃ ಹಾವೇರಿ.
ಹಾಲಿ ವಸ್ತಿಃ ವಿಶ್ವವೇಶ್ವರತೀರ್ಥ ನಗರ,
ಹಾನಗಲ್ಲ ರೋಡ್, ಹಾವೇರಿ.

2. ಕರ್ಣವ್ ತಂದೆ ಪ್ರವೀಣ್ ರಿತ್ತಿ,
ವಯಸ್ಸುಃ 9 ವರ್ಷ, ಉದ್ಯೋಗಃ ವಿದ್ಯಾರ್ಥಿ,
ಸಾಃ ಆಡೂರು, ತಾಃ ಹಾನಗಲ್,
ಜಿಃ ಹಾವೇರಿ,
ಹಾಲಿ ವಸ್ತಿಃ ವಿಶ್ವವೇಶ್ವರತೀರ್ಥ ನಗರ,
ಹಾನಗಲ್ಲ ರೋಡ್, ಹಾವೇರಿ.

3. ಸಾನ್ವಿ ತಂದೆ ಪ್ರವೀಣ್ ರಿತ್ತಿ,
ವಯಸ್ಸುಃ 4 ವರ್ಷ, ಉದ್ಯೋಗಃ ಏನೂ ಇಲ್ಲ,
ಸಾಃ ಆಡೂರು, ತಾಃ ಹಾನಗಲ್,
ಜಿಃ ಹಾವೇರಿ,
ಹಾಲಿ ವಸ್ತಿಃ ವಿಶ್ವವೇಶ್ವರತೀರ್ಥ ನಗರ,
ಹಾನಗಲ್ಲ ರೋಡ್, ಹಾವೇರಿ.

(2 ಮತ್ತು 3 ನೇ ಅರ್ಜಿದಾರರು ಅಲ್ಪವಯಿ ಇದ್ದು,
1 ನೇ ಅರ್ಜಿದಾರರು ಅಲ್ಪವಯಿ
ಸಂರಕ್ಷಣಾದಾರರಾಗಿ ಪ್ರತಿನಿಧಿಸಿರುತ್ತಾರೆ )

***(ಪ್ರತಿನಿಧಿಸುವವರು ಶ್ರೀ. ಡಬ್ಲೂ.ಎನ್.ಜಿ., ವಕೀಲರು)***

**ವಿರುದ್ಧ**

**ಎದುರುದಾರರು :**

1. ಪ್ರವೀಣ್ ತಂದೆ ಭೀಮರೆಡ್ಡಿ ರಿತ್ತಿ,
ವಯಸ್ಸುಃ 37 ವರ್ಷ, ಉದ್ಯೋಗಃ ವ್ಯಾಪಾರ,
ಸಾಃ #304 , ವನದನ ಕೋರಲ್,
2 ನೇ ಪೇಸ್ , ಬಿಲೆಕನಳ್ಳಿ ,
ಬೆಂಗಳೂರು-560076.

2. ಶಾಖಾ ವ್ಯವಸ್ಥಾಪಕರು,
ACKO ಜನರಲ್ ಎನ್ಸೂರೆನ್ಸ ಲಿಮಿಟೆಡ್,
2 ನೇ ಮಹಡಿ, #36/5, ಸೋಮಸಂದ್ರಪಾಳ್ಯ
27 ನೇ ಮುಖ್ಯ ರಸ್ತೆ, ಹೆಚ್ ಎಸ್ ಆರ್ ಲೇಔಟ್,
ಬೆಂಗಳೂರು.

**(ಪ್ರತಿನಿಧಿಸುವವರು ಎದುರುದಾರ 1 ರವರ ಪರ ಶ್ರೀ. ಹೆಚ್.ಎಮ್ .ಬಿ ., 2 ರವರ ಪರ ಶ್ರೀ ಎಸ್.ಎಸ್.ಕೆ., 4 ರವರ ಪರ ಶ್ರೀ ಎನ್.ಡಿ., 5 ರವರ ಪರ ಶ್ರೀ ವೈ.ಹೆಚ್.ಕೆ., ವಕೀಲರು ಎದುರುದಾರ 3 ರವರು ಏಕಪಕ್ಷೀಯ)**

**ಆದೇಶ**

ಮಧ್ಯಂತರ ಅರ್ಜಿ ಸಂಖ್ಯೆ 1 ಸಿ.ಪ್ರ.ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹ ಕಲಂ.151 ರ ಅಡಿಯಲ್ಲಿ ಅರ್ಜಿದಾರರದ ಶ್ರೀಮತಿ ಶಾರದ ರವರು ಅರ್ಜಿಯನ್ನು ಸಲ್ಲಿಸಿ, ಮೂಲ ಅರ್ಜಿಯಲ್ಲಿ 5 ನೇ ಎದುರುದಾರರಾಗಿ ಸೇರ್ಪಡೆಗೊಳಿಸಬೇಕೆಂದು ಕೋರಿರುತ್ತಾರೆ.

**2. <u>ಅರ್ಜಿಯಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ -</u>**

ಅರ್ಜಿಯೊಂದಿಗೆ ಅರ್ಜಿಯೊಂದಿಗೆ ಲಗತ್ತಿಸಿದ ಪ್ರಮಾಣ ಪತ್ರದಲ್ಲಿ, ತಾನು ಮೃತ ಚೇತನ ಗಾಲಪೂಜಿ ರವರ ತಾಯಿಯಾಗಿದ್ದು, ಆಕೆ ದಿನಾಂಕ 23.05.2022 ರಂದು ರಸ್ತೆ ಅಪಘಾತದಲ್ಲಿ ಮೃತಪಟ್ಟ ಕಾರಣ ಪರಿಹಾರ ಕೋರಿ ಈಗಾಗಲೇ ಎಮ್.ವಿ.ಸಿ ನಂ.6137/2022 ರಂತೆ ಮೋಟಾರ್ ವಾಹನ ಅಪಘಾತ ಪರಿಹಾರ ಮಂಡಳಿ ಬೆಂಗಳೂರು (SCCH-09) ದಾಖಲಿಸಿದ್ದು ಇರುತ್ತದೆ. ಮೃತಳ ಅಪ್ರಾಪ್ತ ಮಕ್ಕಳಿಗೆ ತಾನೆ ಪೋಷಕರಾಗಿ ಸದರಿ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.32 ನಿಯಮ 1 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಅಪ್ರಾಪ್ತ ಮಕ್ಕಳ ಪೋಷಕರನ್ನಾಗಿ ನೇಮಿಸಿದ್ದು ಇರುತ್ತದೆ ಎಂದು ಕಾರಣಗಳನ್ನು ನೀಡಿರುತ್ತಾರೆ.

**3.** ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಮುಂದುವರೆದು, ಈ ಪ್ರಕರಣದ 1 ನೇ ಎದುರುದಾರರು ಕಾರನ್ನು ಚಾಲನೆ ಮಾಡುತ್ತಿದ್ದಾಗ, ರಾಷ್ಟ್ರೀಯ ಹೆದ್ದಾರಿ-48 ಹಿರಿಯೂರು ಶಿರಾ ನಡುವೆ ಉಜ್ಜನಕುಂಟೆ ಗ್ರಾಮದ ಬಳಿ ದಿನಾಂಕ 23.05.2022 ರಂದು ಅಪಘಾತ ಆಗಿದ್ದು ಇರುತ್ತದೆ. ಸದರಿ ಅಪಘಾತದಲ್ಲಿ ಅರ್ಜಿದಾರರ ಮಗಳು ಚೇತನಾ ರವರು ತೀವ್ರವಾಗಿ ಗಾಯಗೊಂಡು ಅದೇ ದಿನ ಮೃತ ಪಟ್ಟಿರುತ್ತಾರೆ. ಈ ಬಗ್ಗೆ 1 ನೇ ಎದುರುದಾರರ ವಿರುದ್ಧ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ.57/2022 ರಂತೆ ಪ್ರಕರಣ ದಾಖಲಿಸಿದ್ದು, ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದು ಸಿ.ಸಿ. ನಂ.3456/2022 ರಂತೆ ನೋಂದಣಿ ಆಗಿದ್ದು ಇರುತ್ತದೆ ಎಂದು ಕಾರಣಗಳನ್ನು ನೀಡಿರುತ್ತಾರೆ.

**4.** ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಮುಂದುವರೆದು, ಎಮ್. ವಿ. ಸಿ. ನಂ.6737/2022 ರಲ್ಲಿ ಈ ಪ್ರಕರಣದ 1 ನೇ ಎದುರುದಾರರನ್ನು 4 ನೇ

ಎದುರುದಾರರನ್ನಾಗಿ ಮಾಡಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಹಾಜರಾಗಿ ತಕರಾರನ್ನು ಸಲ್ಲಿಸಿದ್ದು, ಆತನ ತಾಯಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. 1 ನೇ ಎದುರುದಾರರ ತಾಯಿ ಈ ಅರ್ಜಿಯನ್ನು ಪರಿಹಾರ ಕೋರಿ ಸಲ್ಲಿಸಿರುವುದರಿಂದ ಮತ್ತು ಒಂದೇ ಅಪಘಾತಕ್ಕೆ ಸಂಬಂಧಿಸಿ ಎರಡು ಪರಿಹಾರದ ಪ್ರಕರಣಗಳು ದಾಖಲಾಗಿರುವ ಕಾರಣ ಎರಡೂ ಪ್ರಕರಣಗಳನ್ನು ಒಟ್ಟುಗೂಡಿಸಬೇಕಾಗಿರುತ್ತದೆ. ಪ್ರಸ್ತುತ ಅರ್ಜಿಯಲ್ಲಿ ಎಮ್.ವಿ.ಸಿ 6137/2022 ದಾಖಲಿಸಿರುವ ಬಗ್ಗೆ ನಮೂದಿಸಿರುವುದಿಲ್ಲ. ಪ್ರಸ್ತುತ ಮುಖ್ಯ ಅರ್ಜಿಯು ಎಮ್.ವಿ.ಸಿ ನಂ.6137/2022 ದಾಖಲಿಸಿದ ನಂತರದ ಅರ್ಜಿಯಾಗಿರುತ್ತದೆ. ಅರ್ಜಿದಾರರು ಪ್ರಸ್ತುತ ಅರ್ಜಿಗೆ ಅವಶ್ಯಕ ಪಕ್ಷಕಾರರು ಆಗಿರುತ್ತಾರೆ ಎಂದು ಕಾರಣಗಳನ್ನು ನೀಡಿರುತ್ತಾರೆ.

**5.** ಮುಖ್ಯ ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ತಕರಾರನ್ನು ಸಲ್ಲಿಸಿರುತ್ತಾರೆ. ತಮ್ಮ ತಕರಾರಿನಲ್ಲಿ, ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ನಮೂದಿಸಿದ್ದಾರೆ ಎಂದು, ಮಧ್ಯಂತರ ಅರ್ಜಿಯು ಕಾನೂನಿನ ಅಡಿಯಲ್ಲಿ ಆಗಲಿ ಅಥವಾ ಸಂಗತಿಯ ಅಡಿಯಲ್ಲಿ ಆಗಲಿ ಊರ್ಜಿತವಾಗುವುದಿಲ್ಲ ಎಂದು, 1 ನೇ ಎದುರುದಾರರ ತಾಯಿಯು, 1 ನೇ ಎದುರುದಾರರ ಮಗ ಮತ್ತು ಮಗಳು ಆದ 2 ಮತ್ತು 3 ನೇ ಅರ್ಜಿದಾರರ ಪರವಾಗಿ ಪ್ರಸ್ತುತ ಅರ್ಜಿಯನ್ನು ಪೋಷಕರಾಗಿ ಸಲ್ಲಿಸಿದ್ದು ಇರುತ್ತದೆ. 1 ನೇ ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಕಾರಣ ಮೊಮ್ಮಕ್ಕಳು 1 ನೇ ಅರ್ಜಿದಾರರ ಸುಪರ್ದಿನಲ್ಲಿ ಇರುತ್ತಾರೆ ಎಂದು ತಕರಾರು ಮಾಡಿರುತ್ತಾರೆ.

**6.** ಅರ್ಜಿದಾರರು ತಮ್ಮ ತಕರಾರಿನಲ್ಲಿ ಮುಂದುವರೆದು, 1 ನೇ ಎದುರುದಾರರ ಅನುಮತಿ ಇಲ್ಲದೇ ಆತನ ಮಕ್ಕಳ ಪರವಾಗಿ ಎಮ್.ವಿ.ಸಿ ನಂ.6137/2022 ನ್ನು ಸಲ್ಲಿಸಿರುವುದು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಸದರಿ ಪ್ರಕರಣದಲ್ಲಿ

4 ನೇ ಎದುರುದಾರರು ವಿವರವಾದ ತಕರಾರನ್ನು ಸಲ್ಲಿಸಿರುತ್ತಾರೆ ಹಾಗೂ ಸದರಿ ಅರ್ಜಿಯ ಪ್ರಕರಣವನ್ನು ವಜಾ ಮಾಡುವಂತೆ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. 1 ನೇ ಎದುರುದಾರರ ಅಪ್ರಾಪ್ತ ಮಕ್ಕಳು 1 ನೇ ಎದುರುದಾರರ ಸುಪರ್ದಿನಲ್ಲಿ ಹಾವೇರಿ ಯಲ್ಲಿ ಇರುವ ಕಾರಣ ಬೆಂಗಳೂರಿನಲ್ಲಿ ಅರ್ಜಿಯು ಊರ್ಜಿತವಾಗುವುದಿಲ್ಲ. 2 ಮತ್ತು 3 ನೇ ಅರ್ಜಿದಾರರು ಮಧ್ಯಂತರ ಅರ್ಜಿ ಸಲ್ಲಿಸಿರುವ ಅರ್ಜಿದಾರರು/ಪ್ರಸ್ತಾವಿತ ಎದುರುದಾರರ ಸುಪರ್ದಿನಲ್ಲಿ ಇರುವುದಿಲ್ಲ. ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಅರ್ಜಿದಾರರರಿಗೆ ಮತ್ತು 1 ನೇ ಎದುರುದಾರರಿಗೆ ತೊಂದರೆ ನೀಡಲು ಈ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದು ತಕರಾರು ಮಾಡಿ , ಮ.ಅ.ಸಂಖ್ಯೆ 1 ನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿರುತ್ತಾರೆ.

**7.** ವಾದ ವಿವಾದವನ್ನು ಆಲಿಸಲಾಯಿತು.

**8.** ಈ ಮೇಲ್ಕಂಡ ಕಾರಣಗಳಿಂದ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

ಅಂಶ 1: ಅರ್ಜಿದಾರರಾದ ಶ್ರೀಮತಿ ಶಾರದ ರವರು ಅವಶ್ಯಕ ಪಕ್ಷಕಾರರು ಎಂದು, ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ಕಾರಣಗಳನ್ನು ನೀಡಿರುತ್ತಾರೆಯೇ?

ಅಂಶ 2: ಯಾವ ಆದೇಶ ?

**9.** ಕಡತದಲ್ಲಿ ಲಭ್ಯವಿರುವ ದಾಖಲಾತಿ ಸಾಕ್ಷ ಹಾಗೂ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳ ಆಧಾರದ ಮೇಲಿಂದ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ .

ಅಂಶ 1 : ಸಕಾರಾತ್ಮಕವಾಗಿ
ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ

**<u>ಕಾ ರ ಣ ಗ ಳು</u>**

**10. <u>ಅಂಶ 1</u>:** ದಿನಾಂಕ 23.05.2022 ರಂದು ಶ್ರೀಮತಿ ಚೇತನಾ ರವರು ರಸ್ತೆ ಅಪಘಾತದಲ್ಲಿ ಮೃತ ಪಟ್ಟ ಕಾರಣ ಮೃತರ ಅತ್ತೆ ಮತ್ತು ಅಪ್ರಾಪ್ತ ಮಕ್ಕಳು ಪರಿಹಾರ ಕೋರಿ ಪ್ರಸ್ತುತ ಎಮ್.ವಿ.ಸಿ ನಂ.325/2023 ನ್ನು ದಾಖಲಿಸಿರುತ್ತಾರೆ. 1 ನೇ ಎದುರುದಾರರು ಅಪ್ರಾಪ್ತ ಅರ್ಜಿದಾರರ ತಂದೆ ಮತ್ತು ಅಪಘಾತ ಪಡಿಸಿದ ಕೆಎ-04-ಎಮ್ ಆರ್-4127 ಕಾರಿನ ಮಾಲೀಕರು ಆಗಿರುತ್ತಾರೆ. ಈ ಬಗ್ಗೆ ಯಾವುದೇ ತಕರಾರು ಸಹ ಇರುವುದಿಲ್ಲ. 1 ನೇ ಅರ್ಜಿದಾರರು 1 ನೇ ಎದುರುದಾರರ ತಾಯಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಶ್ರೀಮತಿ ಶಾರದ ರವರು ಮೃತ ಚೇತನಾ ರವರ ತಾಯಿ ಎಂದು ಕ್ಲೇಮು ಮಾಡಿರುತ್ತಾರೆ. ಸದರಿ ಯವರು ಮೃತರ ತಾಯಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**11.** ಇದೇ ಅಪಘಾತಕ್ಕೆ ಸಂಬಂಧಿಸಿ ಮೃತರ ತಾಯಿ ಪರಿಹಾರ ಕೋರಿ ಈಗಾಗಲೇ ಎಮ್.ವಿ.ಸಿ ನಂ.6137/2022 ರಂತೆ ಪ್ರಕರಣ ದಾಖಲಿಸಿರುವ ಬಗ್ಗೆಯೂ ಯಾವುದೇ ತಕರಾರು ಇರುವುದಿಲ್ಲ. ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ, ತನ್ನ ಮೃತ ಮಗಳಾದ ಚೇತನಾ ರವರ ಮಕ್ಕಳ ಪರವಾಗಿ ಪೋಷಕರಾಗಿಯೂ ಅರ್ಜಿ ಸಲ್ಲಿಸಿರುವುದಾಗಿ ಕಾರಣಗಳನ್ನು ನೀಡಿರುತ್ತಾರೆ. ಒಂದೇ ಅಪಘಾತಕ್ಕೆ ಸಂಬಂಧಿಸಿ ಎರಡು ಪರಿಹಾರ ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ಅರ್ಜಿದಾರರು ಮೃತರ ತಾಯಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಮೃತರಿಗೆ ತಾಯಿಯ ಮೇಲೆ ಪ್ರೀತಿ ವಾತ್ಸಲ್ಯ ಇದ್ದೆ ಇರುತ್ತದೆ. ತಾಯಿಯು ಮಗಳ ಮೇಲೆ ಅವಲಂಬಿತರು ಆಗಿರುತ್ತಾರೆ ಎಂದು ಸಹ ಪರಿಗಣಿಸಬಹುದಾಗಿರುತ್ತದೆ.

**12.** ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲೆಗಳ ಪ್ರಕಾರವೂ ಎರಡು ಮತ್ತು ಮೂರನೇ ಅರ್ಜಿದಾರರು ಎರಡೂ ಪ್ರಕರಣಗಳಲ್ಲಿ ಅರ್ಜಿದಾರರು ಆಗಿರುತ್ತಾರೆ. ಒಂದೇ ಅಪಘಾತಕ್ಕೆ ಸಂಬಂಧಿಸಿ ನೊಂದ ವ್ಯಕ್ತಿಗಳು ಎರಡೂ ಕಡೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಅಪ್ರಾಪ್ತ ಮಕ್ಕಳ ಪರವಾಗಿ ತಂದೆಯ ಕಡೆಯಿಂದ ಅಜ್ಜಿ ದಾಖಲಿಸಿರುತ್ತಾರೆ. ಎಮ್.ವಿ.ಸಿ ನಂ.6137/2022 ನ್ನು ಅಪ್ರಾಪ್ತ ಮಕ್ಕಳ ಪರವಾಗಿ ತಾಯಿಯ ಕಡೆಯಿಂದ ಅಜ್ಜಿ ದಾಖಲಿಸಿರುತ್ತಾರೆ. ಅಪ್ರಾಪ್ತ ಮಕ್ಕಳ ಪೋಷಕರ ಬಗ್ಗೆ ವ್ಯಾಜ್ಯವಿರುತ್ತದೆ. ಅಪ್ರಾಪ್ತ ಮಕ್ಕಳು ಯಾರ ಸುಪರ್ದಿನಲ್ಲಿ ಇದ್ದಾರೆ ಎನ್ನುವುದು ಪ್ರಶ್ನೆ ಆಗಿರುತ್ತದೆ. ಮೃತರ ತಾಯಿ ಪರಿಹಾರ ಕೋರಲು ಅರ್ಹತೆ ಉಳ್ಳವರು ಸಹ ಆಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಅರ್ಜಿದಾರು ಪ್ರಸ್ತುತ ಪ್ರಕರಣಕ್ಕೆ ಅವಶ್ಯಕ ಪಕ್ಷಕಾರರು ಎಂದು ಕಂಡು ಬರುತ್ತದೆ.

**13.** ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ಅರ್ಜಿದಾರರಿಗೆ ಅಥವಾ ಎದುರುದಾರರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಅರ್ಜಿಯನ್ನು ನಿರಾಕರಿಸಿದರೆ, ಪ್ರಕರಣಗಳು ದ್ವಿಗುಣವಾಗುವ ಸಾಧ್ಯತೆ ಇರುತ್ತದೆ. ಮೃತರ ವಾರಸುದಾರರು ಮತ್ತು ಅವಲಂಬಿತರು ಪರಿಹಾರ ಪಡೆಯಲು ಅರ್ಹರಿರುತ್ತಾರೆ. ಮೃತರ ತಾಯಿ ವಾರಸುದಾರರು ಆಗಿರುತ್ತಾರೆ ಮತ್ತು ಅವಲಂಬಿತರು ಸಹ ಆಗಿರುತ್ತಾರೆ. ಮಧ್ಯಂತರ ಅರ್ಜಿಯನ್ನು ನಿರಾಕರಿಸಿದರೆ, ಅರ್ಜಿದಾರರಿಗೆ ತೊಂದರೆ ಆಗುವ ಸಾಧ್ಯತೆ ಇರುತ್ತದೆ. ಉಭಯತರ ನಡುವಿನ ವ್ಯಾಜ್ಯವನ್ನು ಸಂಪೂರ್ಣವಾಗಿ ನಿರ್ಣಯಿಸಲು ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆಂದು ಕಂಡು ಬರುತ್ತದೆ. ಮಧ್ಯಂತರ ಅರ್ಜಿಯನ್ನು ನಿರಾಕರಿಸಲು ಯಾವುದೇ ಬಲವಾದ ಕಾರಣಗಳು ಅಥವಾ ಸಂದರ್ಭಗಳು ಇರುವುದಿಲ್ಲ. ಆದ್ದರಿಂದ, ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಿ, **ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

**14. <u>ಅಂಶ 2</u>** : ಈ ಮೇಲ್ಕಂಡ ಕಾರಣಗಳಿಂದ, ಈ ಅಂಶಕ್ಕೆ ಈ ಕೆಳಕಂಡಂತೆ ಉತ್ತರಿಸಿದೆ.

**<u>ಆದೇಶ</u>**

ಮಧ್ಯಂತರ ಅರ್ಜಿ ಸಂಖ್ಯೆ 1 ಸಿ.ಪ್ರ.ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹ ಕಲಂ.151 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರಾದ ಶ್ರೀಮತಿ ಶಾರದ ರವರನ್ನು ಮುಖ್ಯ ಅರ್ಜಿಯಲ್ಲಿ 5 ನೇ ಎದುರುದಾರರನ್ನಾಗಿ ಸೇರ್ಪಡೆಗೊಳಿಸಲು ಆದೇಶಿಸಿದೆ.

ಮುಖ್ಯ ಅರ್ಜಿ/ವಾದ ಪತ್ರದ ಶಿರೋನಾವೆಯಲ್ಲಿ ತಿದ್ದುಪಡಿ ಮಾಡಿ, ತಿದ್ದುಪಡಿ ಮುಖ್ಯ ಅರ್ಜಿ/ವಾದ ಪತ್ರವನ್ನು ಸಲ್ಲಿಸಲು ದಿನಾಂಕ 15.10.2024 ರಂದು ಕರೆಯುವುದು.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟಿದ್ದು, ಬೆರಳಚ್ಚು ಮಾಡಿ ಮುದ್ರಣ ತೆಗೆದು ಅದರಲ್ಲಿನ ತಪ್ಪುಗಳನ್ನು ತಿದ್ದಿ ಇಂದು ದಿನಾಂಕಃ **03 ನೇ ಸೆಪ್ಟೆಂಬರ್ 2024** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಪ್ರಕಾಶ್.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ**